ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ
ವಾರಪತ್ರಿಕೆ

SJ ಸ್ಥಾಪನೆ : 1948
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 27 ॥ ಸಂಚಿಕೆ : 49॥ UDP/1263/2018-20 ॥ R.NO.50495/91 ॥ ತಾರೀಕು : 02–01–2018 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

## 2018ಕ್ಕೆ ಮುನ್ನಡೆ



ಕುಂದಾಪುರದ ಶಾಸ್ತ್ರೀವೃತ್ತದ ಬಳಿ ಚತುಷ್ಪಥ ರಾಷ್ಟ್ರೀಯ ಹೆದ್ದಾರಿಗಾಗಿ ನಿರ್ಮಾಣಗೊಳ್ಳುತ್ತಿರುವ ಮೇಲ್‌ಸೇತುವೆ ಕಾಮಗಾರಿ ಅಪೂರ್ಣಗೊಂಡಿರುವುದರಿಂದ ಕುಂದಾಪುರದಲ್ಲಿ ರಾಷ್ಟ್ರೀಯ ಹೆದ್ದಾರಿ ಸಮಸ್ಯೆ 2018ಕ್ಕೂ ಹಾಗೆ ಉಳಿದುಕೊಂಡು ಮುನ್ನಡೆದಿದೆ . ಜನರಿಗೆ , ವ್ಯವಹಾರಸ್ಥರಿಗೆ ಭಾರೀ ಸಮಸ್ಯೆಯನ್ನು ಉಂಟುಮಾಡಿದೆ.

## "ಊರ್‌ಮನಿ ಹಬ್ಬದ ಸಂಭ್ರಮ





ಉಳ್ಳಾಲದಿಂದ ಕಾರವಾರದವರೆಗಿನ ಸುಮಾರು 400 ಕಿ.ಮೀ.ನ ಕರಾವಳಿಯ ಅದ್ಭುತ ಸೊಬಗು, ಇಲ್ಲಿನ ಪ್ರಾಕೃತಿಕ ಸೌಂದರ್ಯವನ್ನು ಹೊರ ಪ್ರಪಂಚಕ್ಕೆ ಅನಾವರಣಗೊಳಿಸುವುದೇ ಊರ್‌ಮನಿ ಹಬ್ಬ ಇದು ಗ್ರಾಮೀಣ ಸೊಗಡಿನ ಸಂಭ್ರಮ ಎಂದು ವಿಧಾನ ಪರಿಷತ್ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

"ಉಡುಪಿ ಪರ್ಬದ ಪ್ರಯುಕ್ತ ಕೋಟೇಶ್ವರ – ಬೀಜಾಡಿಯ ಕಿನಾರ ಬೀಚ್‌ನಲ್ಲಿ ಕೋಟೇಶ್ವರ ಕಿನಾರ ಬೀಚ್ ಉತ್ಸವ ಸಮಿತಿ ನೇತೃತ್ವದಲ್ಲಿ ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ ಉಡುಪಿ, ಪುರಸಭೆ ಕುಂದಾಪುರ, ಗ್ರಾ.ಪಂ. ಬೀಜಾಡಿ, ಕೋಟೇಶ್ವರ ಹಾಗೂ ಸ್ಥಳೀಯ ಯುವಕ ಮಂಡಲಗಳ ಸಹಕಾರದಲ್ಲಿ ಆಯೋಜಿಸಿದ "ಊರ್‌ಮನಿ ಹಬ್ಬಕ್ಕೆ ಶುಕ್ರವಾರ ಬಲೂನ್ ಹಾರಿ ಬಿಡುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಕುಂದಾಪುರ ತಾ.ಪಂ. ಅಧ್ಯಕ್ಷೆ ಜಯಶ್ರೀ ಸುಧಾಕರ ಮೊಗವೀರ ಶುಭಹಾರೈಸಿದರು.

ಕುಂದಾಪುರ ಉಪವಿಭಾಗದ ಸಹಾಯಕ ಆಯುಕ್ತೆ ಶಿಲ್ಪಾನಾಗ್ ಪ್ರಾಸ್ತಾವಿಕ ಮಾತನಾಡಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಸುಂದರ ಸಮಾರಂಭ ಏರ್ಪಡಿಸಲಾಗುವುದು ಎಂದರು.

ಮೀನುಗಾರಿಕಾ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಹೆರಿಯಣ್ಣ ಚಾತ್ರಬೆಟ್ಟು ಪುರಸಭೆ ಉಪಾಧ್ಯಕ್ಷ ರಾಜೇಶ್ ಕಾವೇರಿ, ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀಲತಾ ಸುರೇಶ್ ಶೆಟ್ಟಿ ಲಕ್ಷ್ಮೀ ಮಂಜುಬಿಲ್ಲವ, ಜಿಲ್ಲಾ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕಿ ಅನಿತಾ, ಕೋಟೇಶ್ವರ ಗ್ರಾ.ಪಂ. ಅಧ್ಯಕ್ಷೆ ಜಾನಕಿ ಬಿಲ್ಲವ ಮಾತನಾಡಿದರು.

ಹಂಗಳೂರು ಚರ್ಚ್‌ನ ಧರ್ಮಗುರುವಂ। ಜಾನ್ ಆಲ್ಫ್ರೆಡ್ ಬರ್ಬೋಝ, ಕೋಟೇಶ್ವರ ಬೀಚ್ ಉತ್ಸವ ಸಮಿತಿ ಅಧ್ಯಕ್ಷ ಉದಯ ಕುಮಾರ್ ಶೆಟ್ಟಿ ತಾ.ಪಂ. ಸದಸ್ಯೆ ವೈಲೆಟ್ ಬರೆಟ್ಟೋ, ಬೀಜಾಡಿ ಗ್ರಾ.ಪಂ.ಅಧ್ಯಕ್ಷೆ ಸಾಕು ಬೀಜಾಡಿ, ಉಪಾಧ್ಯಕ್ಷೆ ಜಯಂತಿ ಗಾಣಿಗ , ಸದಸ್ಯರಾದ ಪ್ರಕಾಶ್ ಜಿ.ಪೂಜಾರಿ , ಭಾಸ್ಕರ ಬಿಲ್ಲವ ಮತ್ತಿತರರಿದ್ದರು.

ಕಾರ್ಯದರ್ಶಿ ಸುಬ್ರಹ್ಮಣ್ಯ ಶೆಟ್ಟಿ ಸ್ವಾಗತಿಸಿ ಪತ್ರಕರ್ತ ಚಂದ್ರಶೇಖರ ಬೀಜಾಡಿ ಕಾರ್ಯಕ್ರಮ ನಿರೂಪಿಸಿದರು.

## ಮೈದಾನದಲ್ಲಿ ಮಲಗುವವರ ಸಮಸ್ಯೆ





ಕುಂದಾಪುರದ ವಡೇರಹೋಬಳಿ ಮೈದಾನದಲ್ಲಿ ರಾತ್ರಿ ಮಲಗುವ ವಲಸೆ ಕಾರ್ಮಿಕರ ಸಮಸ್ಯೆ ಪರಿಹಾರಗೊಳ್ಳದೇ ಇರುವುದರಿಂದ 2018ರಲ್ಲೂ ಇದು ಇನ್ನಷ್ಟು ಗಂಭೀರವಾಗಿ ಮುಂದುವರಿದಿದೆ. ಸ್ಥಳೀಯರು ಮೈದಾನದಲ್ಲಿ ವಾಹನಗಳನ್ನು ಓಡಾಡಿಸುವಂತಿಲ್ಲ. ನಡೆದಾಡಿಯೂ ತಿರುಗುವಂತಿಲ್ಲ ಎಂಬ ಪರಿಸ್ಥಿತಿಯೂ ಇದೆ. ಅದರಲ್ಲೂ ಮದ್ಯಪಾನ ಮತ್ತು ಅಮಲು ಪದಾರ್ಥಗಳ ದಾಸರಾದವರಿಂದ ಇನ್ನಷ್ಟು ಸಮಸ್ಯೆ ಬಿಗಡಾಯಿಸಿದೆ.

## ಅದ್ಭುತ ಪರಿಕಲ್ಪನೆ

ಕುಂದಾಪುರ ಮಣ್ಣಿನ ಸಂಸ್ಕೃತಿ, ಆಚಾರ ವಿಚಾರಗಳನ್ನು ಬಿಂಬಿಸುವ ಊರ್‌ಮನಿ ಹಬ್ಬ ಅದ್ಭುತ ಪರಿಕಲ್ಪನೆಯಾಗಿದೆ. ಇಂತಹ ಉತ್ಸವಗಳು ಯಶಸ್ವಿಯಾಗಬೇಕಾದರೆ ಜನರ ಸಹಕಾರ ಅಗತ್ಯ. ಸಾವಿರಾರು ಮಂದಿ ಈ ಉತ್ಸವದಲ್ಲಿ ಪಾಲ್ಗೊಳ್ಳುವುದರ ಮೂಲಕವಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಾರೆ ಎಂದು ಖ್ಯಾತ ಸಂಗೀತ ನಿರ್ದೇಶಕ, ಕುಂದಗನ್ನಡ ಭಾಷೆಯನ್ನು ಚಲನಚಿತ್ರಕ್ಕೆ ಅಳವಡಿಸಿದ ನಿರ್ದೇಶಕ ರವಿ ಬಸ್ರೂರು ಹೇಳಿದರು.

(12ನೇ ಪುಟಕ್ಕೆ)

ಕುಂದಾಪುರದಲ್ಲಿ 5 ದಶಕಗಳಿಂದ ನಿರಂತರ ಸೇವೆಯಲ್ಲಿರುವ
VB
ವಸಂತ ಬೇಕರಿ
ಗ್ರಾಹಕರ ಅನುಕೂಲತೆಗಾಗಿ ಅತ್ಯಂತ ಸುಸಜ್ಜಿತವಾಗಿ ಇನ್ನೊಂದು ನೂತನ ಮಾರಾಟ ಕೇಂದ್ರವನ್ನು ಪ್ರಾರಂಭಿಸಲಾಗಿದೆ.
ಕಾರ್ಪೋರೇಶನ್ ಬ್ಯಾಂಕ್ ಬಳಿ, ಮುಖ್ಯ ರಸ್ತೆ, ಕುಂದಾಪುರ
ಫೋನ್ : 08254–230503, ಮೊ: 9448171188

Good News for Science students of
Kundapura..
7th ANNIVERSARY
JEE / NEET 2 YEAR REGULAR COACHING
for Just 10000/-* per year
*including study materials worth 3000/-
Extra 10% discount for Govt PU students and students
who have scored above 95% in SSLC
Offer valid till 31st August only. (30 Seats only)
Saraswathi Group Of Institutes
SARASWATHI COACHING CENTER
287/1, SRI GANESH PRASAD, NEAR BEO OFFICE
WEST BLOCK ROAD, KUNDAPURA
Ph: 9141138705/9916034605